

# ಹೀಗೊಂದು ಚಿಟ್ಟೆಯ ಡೆಲಿವರಿ..



ಲೇಖನ-ಚಿತ್ರ:
**ಶಿವು. ಕೆ.**

ನನ್ನ ಕೈಯಲ್ಲಿರುವ ಪೆನ್ನು 'ಪ್ರಜಾವಾಣಿ ದಿನಪತ್ರಿಕೆಯ ಮೊತ್ತವನ್ನು ಪೇಪರ್ ಬಿಲ್ಲಿನಲ್ಲಿ ಬರೆಯುತ್ತಿದ್ದರೂ ನನ್ನ ಕಣ್ಣು ಮಾತ್ರ ಆ ಗಿಡದ ಕಡೆಗಿತ್ತು. ಗಿಡಗಳಲ್ಲಿರುವ ಹೂಗಳಿಗಿಂತ ಅದರ ಎಲೆಗಳು ನನ್ನನ್ನು ಹೆಚ್ಚಾಗಿ ಸೆಳೆಯುತ್ತವೆ. ಅದರಲ್ಲೂ ಅಂಗವಿಕಲ ಎಲೆಗಳು! ಒಂದೆರಡು ಎಲೆಗಳು ಈ ರೀತಿ ಯಾವುದೇ ಗಿಡದಲ್ಲಿದ್ದರೂ ನನ್ನ ಕುತೂಹಲ ಹೆಚ್ಚಾಗುತ್ತದೆ. ಹತ್ತಿರ ಹೋಗಿ ಎಲೆಯ ಕೆಳಭಾಗದಲ್ಲಿ ನೋಡಿದರೆ ಯಾವುದಾದರೂ ಒಂದು ಹುಳು ಅದೇ ಎಲೆಯನ್ನು ತಿನ್ನುತ್ತಿರುತ್ತದೆ.

ಇಷ್ಟಾದರೆ ಸಾಕು. ಅಲ್ಲಿಂದ ಶುರುವಾಗುತ್ತದೆ ನನ್ನ ಹೊಸ ಆಸೈನ್‌ಮೆಂಟು. ಮನೆಗೆ ಬಂದು ನನ್ನ ಬಳಿ ಇರುವ ಚಿಟ್ಟೆ, ಹುಳುಗಳ ಪುಸ್ತಕಗಳಿಂದ ಗಿಡ ಹೆಸರು, ಹುಳುವಿನ ಬಣ್ಣ ಆಕಾರ ನೋಡಿ ತಿಳಿದ ಮಾಹಿತಿಯಿಂದ ನನ್ನ ಕ್ಯಾಮೆರಾ ಜಾಗೃತವಾಗುತ್ತದೆ.

ನುಗ್ಗೆ ಎಲೆಯಷ್ಟೆ ಚಿಕ್ಕದಾದ ಹಸಿರೆಲೆಗಳನ್ನು ತನ್ನ ಕಾಂಡಗಳ ತುಂಬಾ ತುಂಬಿಕೊಂಡಿದ್ದ ಆ 'ಮುಳ್ಳಿನ ಗಿಡ' ನನ್ನ ಗಮನ ಸೆಳೆದಿತ್ತು. ಆ ಮನೆಯವರು ನನ್ನ ಕೈಯಿಂದ ರಶೀತಿ ಪಡೆದು ಹಣ ತರಲು ಒಳಹೋದ ಮೇಲೆ ನಾನು ಕೆಳಗೆ ಕುಳಿತು ನಿಧಾನವಾಗಿ ನೋಡಿದರೆ ಹಸಿರು ಬಣ್ಣದ ಹತ್ತಾರು ಹುಳುಗಳು ಗಿಡದ ಎಲೆಗಳ ಮೇಲೆ ಕೆಳಗೆ ಬಸವನ ಹುಳುವಿನ ವೇಗದಲ್ಲಿ ಹರಿದಾಡುತ್ತಾ ಎಲೆಗಳನ್ನೇ ತಿನ್ನುತ್ತಿವೆ! ತಕ್ಷಣ ನೋಡಿದರೆ ಎಲೆ ಯಾವುದು..

(8ನೇ ಪುಟ ನೋಡಿ)